( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 20/08/2022**

**ಅಸಲು ದಾವೆ.ನಂ.2/2013**

**ಪಿ.ಡಬ್ಲ್ಯೂ 1**

( ಪಾಟೀ ಸವಾಲುಃ ಶ್ರೀ. ಆರ್ ಸಿ ವಕೀಲರಿಂದ 4 ಮತ್ತು 5 ನೇ ಪ್ರತಿವಾದಿಯರ ಪರವಾಗಿ )

ಲಕ್ಕಯ್ಯನಿಗೆ ಎರಡು ಜನ ಪತ್ನಿಯರು. ಹಿರಿಯ ಹೆಂಡತಿ ಹೆಸರು ಜವರಮ್ಮ. 2 ನೇ ಹೆಂಡತಿ ಹೆಸರು ಚನ್ನಮ್ಮ. ಲಕ್ಕಯ್ಯನಿಗೆ ಸರ್ವೆ ನಂ 13/2 ರಲ್ಲಿ ಒಟ್ಟು 1 ಎಕರೆ 34 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನಿನ ಪೈಕಿ ಲಕ್ಕಯ್ಯನ ಹಿರಿಯ ಹೆಂಡತಿಯ ಹಿಸ್ಸೆಗೆ 37 ಗುಂಟೆ ಜಮೀನು ಮತ್ತು 2 ನೇ ಹೆಂಡತಿಯ ಹಿಸ್ಸೆಗೆ 37 ಗುಂಟೆ ಜಮೀನು ಹೋಯಿತು ಎಂದರೆ ಸರಿ. ನಾಗರಾಜು ರವರ ತಂದೆಯ ಹೆಸರು ಲಕ್ಕಯ್ಯ. ನನಗೆ ನಾಗರಾಜು ಒಬ್ಬನೇ ತಮ್ಮ ಎಂದರೆ ಸರಿ. ನಾಗರಾಜನಿಗೆ ಎರಡು ಹೆಂಡತಿಯರು ಎಂದರೆ ನನಗೆ ತಿಳಿದಿಲ್ಲ. ನನ್ನ ಹೆಸರು ರತ್ನಮ್ಮ. ಚನ್ನಮ್ಮ ಎಂದರೆ ನನ್ನ ತಾಯಿ. ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸದರಿ ವಂಶವೃಕ್ಷವನ್ನು ನಿಮ್ಮ ತಾಯಿ ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. ನಿಪಿ 1 ರಲ್ಲಿ ಬರೆಸಿರುವ ವಂಶವೃಕ್ಷ ಸರಿಯಾಗಿದೆ ಎಂದರೆ ಸರಿ. ಲಕ್ಕಯ್ಯನ ಹಿರಿಯ ಹೆಂಡತಿಯಾದ ಜವರಮ್ಮನ ಹಿಸ್ಸೆಗೆ ಹೋದ 37 ಗುಂಟೆ ಜಮೀನಿಗೂ ದಾವಾ ಅನುಸೂಚಿ ಸ್ವತ್ತುಗಳಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂದಪಟ್ಟ ಕಂದಾಯ ದಾಖಲಾತಿಗಳು ನನ್ನ ತಮ್ಮನಾದ ನಾಗರಾಜು ಬದುಕಿದ್ದ ಸಂದರ್ಭದಲ್ಲಿ ಅವರ ಹೆಸರಿನಲ್ಲಿತ್ತು ಎಂದರೆ ಸರಿ. ನಾಗರಾಜು ಮರಣ ಹೊಂದಿದ ನಂತರ ನಾಗರಾಜುರವರ ಹಿರಿಯ ಹೆಂಡತಿ ಮುತ್ತಮ್ಮ ದಾವಾ ಅನುಸೂಚಿ ಸ್ವತ್ತುಗಳ ಖಾತೆಯನ್ನು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಮುತ್ತಮ್ಮನ ಹೆಸರಿನಲ್ಲಿರುವ ಜಮೀನಿನ ಪೈಕಿ ಚಂದ್ರಿಕಾ ಮತ್ತು ಅವರ ಮಗಳಿಗೆ ಹಿಸ್ಸೆಯನ್ನು ಕೊಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.